ಬಂದ ದಿನ ನಮ್ಮ ಟ್ರೀಟ್‌ಮೆಂಟ್‌ಗೆ ನಿಮ್ಮ ಸಿಸ್ಟರ್ ಸರಿಯಾಗಿ ಸ್ಪಂದಿಸಲಿಲ್ಲ. ಬದುಕಬೇಕನ್ನೋದಕ್ಕಿಂತ, ಸಾವಿನ ಹಂಬಲವೇ ಅಧಿಕವಾಗಿತ್ತು. ನಿಮ್ಮ ಫ್ಯಾಮಿಲಿ ಪ್ರಾಬ್ಲಮ್ ಏನಿದೆಯೊ ಗೊತ್ತಿಲ್ಲ. ಬಟ್ ನಿಮ್ಮ ಹುಡುಗಿ ಮೆಂಟಲಿ ತುಂಬಾ ಡಿಸ್ಟರ್ಬ್ ಆಗಿದಾಳೆ. ನೀವು ನೆಗ್ಲೆಕ್ಟ್ ಮಾಡಿದ್ರೆ ಹುಚ್ಚಿಯಾಗುವ ಸಂಭವವೇ ಹೆಚ್ಚು. ಹಾಗಾಗಿ ಆದಷ್ಟು ಬೇಗ ಒಳ್ಳೆ ಸೈಕಿಯಾಟ್ರಿಸ್ಟ್ ಹತ್ತಿರ ತೋರಿಸಿದರೆ ಬೆಟರ್ ಅನಿಸುತ್ತೆ' ಅಂತ ಡಾಕ್ಟ್ರು ಸಲಹೆ ನೀಡಿದರು.

'ಆಯ್ತು ಸರ್ ನೆಗ್ಲೆಕ್ಟ್ ಮಾಡಲ್ಲ. ತಡ ಮಾಡ್ದಂಗೆ ನಾಳೆನೆ ಕರಕೊಂಡು ಹೋಗಿ ತೋರುಸ್ತೀವಿ' ಅಂತೇಳಿ ಡಾಕ್ಟ್ರ ಸಲಹೆಗೆ ಕೃತಜ್ಞತಾಪೂರ್ವಕವಾಗಿ ಕೈಮುಗಿದು ರೂಪಾಳನ್ನು ಕರಕೊಂಡು ಊರಿಗೆ ಬರುವಾಗ ಸುಜಾತಳಿಗೆ ಥಟ್ಟನೆ ನೆನಪಾದದ್ದು, ಸೈಕಿಯಾಟ್ರಿಸ್ಟ್ ಆಗಿರೊ ತನ್ನ ಗೆಳತಿ ಶ್ರಾವಣಿ. ಅಂಗೈಯಲ್ಲಿ ಬೆಣ್ಣೆಯಿಟ್ಟುಕೊಂಡು ತುಪ್ಪಕ್ಕೆ ಯಾಕೆ ಹುಡುಕಾಡಬೇಕೆಂದು ಭಾವಿಸಿದಳು. 'ಎಲೆಕ್ಟ್ರಾನಿಕ್ ಸಿಟಿಯಲ್ಲಿ ಮಧುರ ಆಪ್ತ ಸಲಹಾ ಕೇಂದ್ರ ಓಪನ್ ಮಾಡಿದೀನಿ. ಬಿಡುವು ಮಾಡಿಕೊಂಡು ಒಂದ್ಸಲ ಕ್ಲಿನಿಕ್ ಕಡೆ ಬಂದು ಹೋಗೆ' ಅಂತ್ಹೇಳಿ ಶ್ರಾವಣಿಯೇ ಫೋನ್ ಮಾಡಿ ಸುಜಾತಳಿಗೆ ತಿಳಿಸಿದ್ದಳು. ಆದರೆ ಕೆಲಸದ ಒತ್ತಡದಿಂದ ಬೆಂಗಳೂರಿನಲ್ಲಿದ್ದರೂ ಭೇಟಿಯಾಗಿರಲಿಲ್ಲ. ಈಗ ಈ ರೀತಿ ಅನುಕೂಲವಾಗುತ್ತಿದೆಯೆಂದು ಭಾವಿಸಿ, ಗೆಳತಿಗೆ ಫೋನ್ ಮಾಡಿ, 'ನೀನು ಎರಡು-ಮೂರು ಸಲ ಕರೆದರೂ ಬರೋಕಾಗಿರಲಿಲ್ಲ ಕಣೆ. ಬಟ್ ಈಗ ನೀನು ಬ್ಯಾಡಂದ್ರು ನನ್ನ ಕಸಿನ್ ಸಿಸ್ಟರ್‌ಅನ್ನು ಕರಕೊಂಡು ನಾಳೆ ಬರ್‍ತಾ ಇದೀನಿ' ಅಂತ ತಿಳಿಸಿದ್ದಳು. ಮನೆಗೆ ಹೋದ ಮೇಲೆ ಡಾಕ್ಟ್ರು ಹೇಳಿದ ವಿಚಾರವನ್ನೇ ಚಿಕ್ಕಪ್ಪನಿಗೆ ಮನವರಿಕೆ ಮಾಡಿಕೊಟ್ಟಿದ್ದಳು.

'ಅದೆಲ್ಲಿಗೆ ಕರಕೊಂಡು ಹೋಗ್ತಿಯೊ ಹೋಗವ್ವ. ದುಡ್ಡು ಎಷ್ಟು ಖರ್ಚಾದರೂ ಪರವಾಗಿಲ್ಲ. ಒಟ್ನಲ್ಲಿ ನಮ್ಮ ರೂಪಾ ಮೊದಲಿನಂಗಾದ್ರೆ ಸಾಕು' ಚಿಕ್ಕಪ್ಪನ ಧಾರಾಳತನದ ಮಾತಿನಿಂದ ಧೈರ್ಯಗೊಂಡ ಸುಜಾತ ಮತ್ತೊಮ್ಮೆ ತನ್ನ ಗೆಳತಿಗೆ ಫೋನ್ ಮಾಡಿ ಕನ್‌ಫರ್ಮ್ ಮಾಡಿದ್ದರಿಂದ ಮರುದಿನ ಮುಂಜಾನೆಗೆ ರೂಪಾಳ ಜೊತೆಗೆ ಕಲಾವತಿಯನ್ನು ಕರಕೊಂಡು ಬೆಂಗಳೂರು ಕಡೆ ಪಯಣ ಬೆಳೆಸಿದ ಸುಜಾತಳಿಗೆ ರೂಪಾಳ ವರ್ತನೆ ಒಗಟಾಗಿ ಕಾಡತೊಡಗಿತ್ತು.

'ನೋಡು ಚಿಗ, ಅವಳ ಮುಖದಲ್ಲೀಗ ಎಷ್ಟೊಂದು ಖುಷಿಯಿದೆ. ಈಗ ನಾವು ಕಾರು ನಿಲ್ಲಿಸದೆ ಹೋಗಿದ್ರೆ ಆ ಸಂತೋಷಾನ ಅವಳಿಂದ ದೂರ ಮಾಡಿದವರಾಗುತಿದ್ವಿ ಅಲ್ವ? ತಾಯಿ ಇಲ್ಲದ ಮಕ್ಕಳಿಗೆ ಇನ್ನೇನು ಕೋರಿಕೆಗಳು ಇರ್‍ತಾವೆ ಚಿಗ? ಇಂಥವೆ ಸಣ್ಣ-ಪುಟ್ಟ ಆಸೆ ಆಕಾಂಕ್ಷೆಗಳು' ಎಂದು ರೂಪಾಳ ಪರವಾಗಿ ಸುಜಾತ ಮಾತಾಡಿದ್ದು ಕಲಾವತಿಗೆ ಹಿಡಿಸಲಿಲ್ಲ. 'ಒಬ್ಬ ಮಗಳಂತೆ ಮುದ್ದು ಮಾಡಿದರೆ ಮಾಳಿಗೆ ಹತ್ತಿ ಮಿಂಡ್ರುನ ನೋಡಿದ್ಲಂತೆ. ಹಂಗಾಗಿದೆ ನಿನ್ನ ತಂಗಿ ಕತೆ. ತಾಯಿ ಇಲ್ಲದ ಮಗಳಂತ ಉದ್ವೇರಿಸಿಕೊಂಡಿದ್ರಿಂದ್ಲೆ ನಮಗೆ ಈ ವನತಿಪ್ಲು. ಕುಡಿದ ನೀರು ಅಲುಗಾಡ್ದಂಗೆ ಸಾಕಿದ್ದರಿಂದ ನಮಗೆಲ್ಲ ಸರಿಯಾದ ಬೋಮಾನ ಕೊಡ್ತಿದ್ಲು' ಅಂತ್ಹೇಳಿ ರೂಪಾಳು ಪ್ರೀತಿಸಿದ ವಿಚಾರವನ್ನು ಮನಸ್ಸಲ್ಲಿಟ್ಟುಕೊಂಡ ಸಿಟ್ಟಿಗೆ ಕಲಾವತಿ ಅಸಮಾಧಾನದಿಂದ ಹೇಳಿದಳು. ಮಾಯುತ್ತಿರುವ ಗಾಯಕ್ಕೆ ಮತ್ತಷ್ಟು ರಜುಗು ಮಾಡುತ್ತಿರುವ ಚಿಕ್ಕಮ್ಮನ ಏಟು ಮಾತುಗಳು ಸುಜಾತಳಿಗೆ ಹಿಡಿಸಲಿಲ್ಲ. ಆ ವಯಸ್ಸಲ್ಲಿ ಅದೆಲ್ಲ ಸಹಜ ಎಂಬಂತೆ ಭಾವಿಸಿ, 'ಹೋಗ್ಲಿ ಬಿಡು ಚಿಗ, ಮತ್ತೆ ಹಳೇದ್ನೆಲ್ಲ ಯಾಕೆ ಕೆದುಕ್ತಿಯ. ಆಗಿದ್ದಾಯ್ತು, ಈಗ ಅವಳೊಂದು ಮಾಮೂಲು ಮನುಷ್ಯಳಾದರೆ ಸಾಕೆಂದು' ಸುಜಾತ ಸ್ವಲ್ಪ ಕಾರವಾಗಿ ಹೇಳಿದಳು.

'ಎಲ್ಲಿಗಂತ ಸುಧಾರಿಸಿಕೆಮ್ಮಿ. ಅದ್ಯಾವ ಗಳಿಗೆಯಲ್ಲಿ ಇವಳ ಮದುವೆ ಆಯ್ತೊ ಏನೊ, ಆಗಿನಿಂದ ಇವಳೂ ನೆಮ್ಮದಿಯಾಗಿಲ್ಲ, ನಮಗೂ ನೆಮ್ಮದಿ ಕೊಟ್ಟಿಲ್ಲ. ಇವರಪ್ಪನದೇ ಒಂದು ಹಠ. ಇವಳ್ದೊಂದು ತರ ಹುಚ್ಚಾಟ. ಇವರಿಬ್ಬರ ನಡುವೆ ನಲುಗಿ ಹೋಗಿರೊ ನನಗೆ ಜಲುಮಾನೇ ರೋಸಿ ಹೋಗಿದೆ. ಜನರ ಬಾಯಾಗೆ ನಾನೊಂದು ಕರಗ್ತಾ ಇದೀನಿ' ಅಂತೇಳಿ ಕಲಾವತಿ ಹನಿಗಣ್ಣಾದಳು.

'ಬೆಟ್ಟಕ್ಕೆ ಬಟ್ಟೆ ಹೊದ್ದಿಸೋಕಾಗಲ್ಲ ಆಡಿಕೊಳ್ಳೊ ಜನರ ಬಾಯಿ ಮುಚ್ಚಿಸೋಕಾಗಲ್ಲ ಚಿಗ. ದಿನ ಕಳೆದ ಮೇಲೆ ಎಲ್ಲಾ ಸರಿ ಹೋಗುತ್ತೆ ಸುಮ್ಕಿರು. ಅವರೇನೊ ಅಂದುಕೊಳ್ತಾರೆ ಇವರೇನೊ ಅಂದುಕೊಳ್ತಾರಂತ ನೀನು ತಿಳಕಂಡಿದ್ರಿಂದ್ಲೆ, ರೂಪಾಳಿಗೆ ಅವಸರದ